


ಸಾಕಷ್ಟು ಜಲಪಾತ ನೋಡಿದ್ದ ನಾವು ಅಷ್ಟೇನೂ ಕುತೂಹಲಿಗಳಾಗಲಿಲ್ಲ. ಜಲಪಾತದ ಮಾಹಿತಿ ಮತ್ತು ಅದರ ಪರಿಸರದ ಇತಿಹಾಸ ಕೇಳಿದ ಮೇಲೆ, ಕೊಂಚ ಕುತೂಹಲ ಮೂಡತೊಡಗಿತು. ನಾವು ನೋಡಿದ ಜಲಪಾತಗಳಲ್ಲಿ ಇದೂ ಒಂದು ಎನ್ನುವ ಮನೋಭಾವ ಬದಲಾಗಲು ಹೆಚ್ಚು ಸಮಯವೇನೂ ಬೇಕಾಗಲಿಲ್ಲ.

ನಮ್ಮನ್ನು ಕರೆದುಕೊಂಡು ಹೊರಟ ವಾಹನ ಜಲಪಾತದ ವಾಹನ ನಿಲುಗಡೆ ಜಾಗದಲ್ಲಿ ಬಂದು ನಿಂತಾಗಲೇ, ಮೊದಲ ನೋಟದಲ್ಲೇ 'ಒಳ್ಳೆಯ ಪರಿಸರ' ಅನ್ನಿಸಿತು. ಆ ಭಾವನೆ ಜಲಪಾತದ ಸಮ್ಮುಖದಲ್ಲಿ ಮತ್ತಷ್ಟು ಬಲವಾಯಿತು.

ಗ್ಯಾಂಗ್‌ಟಾಕ್‌ನಿಂದ ಸುಮಾರು 4 ಕಿ.ಮೀ. ದೂರದಲ್ಲಿ ಬನ್‌ಜಾಕ್ರಿ ಜಲಪಾತವಿದೆ. ಈ ಜಲಪಾತ ಸುಮಾರು 100 ಅಡಿ ಎತ್ತರದಿಂದ ಬೀಳುತ್ತದೆ. ಈ ಎತ್ತರ ಮೈ ಜುಂ ಎನ್ನುವಂತೆ ಮಾಡುವುದಿಲ್ಲವಾದರೂ, ಜಲಧಾರೆಯ ಗಾಂಭೀರ್ಯ ಹಾಗೂ ಸರಳತೆಯೇ ಮನಸೂರೆಗೊಳ್ಳುತ್ತದೆ.

'ಭನ್' ಎಂದರೆ ಕಾಡು ಹಾಗೂ 'ಜಕ್ರಿ' ಎಂದರೆ ಗುಣಪಡಿಸುವವ ಎಂದು ಅರ್ಥವಿದೆ. ಈ ಪರಿಸರದಲ್ಲಿ ಹಿಂದೆ ಶಮನ್ ಎಂಬ ಸಾಂಪ್ರಾದಾಯಿಕ ವೈದ್ಯರು ಅಥವಾ ಪೂಜಾರಿಗಳ ನೆಲೆಯಾಗಿತ್ತಂತೆ. ಅವರು ಪರಿಸರದ ಹಾಗೂ ಸಮುದಾಯಗಳನ್ನು ಸಲಹುತ್ತಿದ್ದರು ಎನ್ನುವ ನಂಬಿಕೆಯಿದೆ. ಹಾಗೆ ರಕ್ಷಿಸುವವರನ್ನು 'ಬನ್ ಜಾಕ್ರಿ' ಎಂದು ಕರೆಯಲಾಗುತ್ತಿದ್ದು, ಅವರ ಹೆಸರೇ ಜಲಪಾತಕ್ಕೂ ಬಂದಿದೆ. ಜಲಪಾತದ ಪರಿಸರದಲ್ಲಿ ಸರ್ಕಾರ 'ಎನರ್ಜಿ ಥೀಮ್ ಪಾರ್ಕ್' ರೂಪಿಸಿದೆ. ಸುಂದರ ಉದ್ಯಾನ ಪ್ರವಾಸಿಗರನ್ನು ಆಕರ್ಷಿಸುತ್ತದೆ. ಉದ್ಯಾನವನದಲ್ಲಿ ಮೋಹಕ ಕೊಳವಿದ್ದು, ಅದರ ಮಧ್ಯದಲ್ಲಿ ಡ್ರ್ಯಾಗನ್ ಇದೆ. ಮಕ್ಕಳಿಗೆ ಆಡಲು ಚಿಕ್ಕ ಚಿಕ್ಕ ಬೋಟ್‌ಗಳಿವೆ. ಸೌರ ವಿದ್ಯುತ್ ವ್ಯವಸ್ಥೆ ಅಲ್ಲಿದೆ. ಸಾಹಸ ಕ್ರೀಡೆಗಳಿಗೂ ಅಲ್ಲಿ ಅವಕಾಶವಿದೆ.

ಜಲಪಾತದ ಕೆಳ ಭಾಗದಲ್ಲಿ ಚಿಕ್ಕ ಕಟ್ಟೆಯನ್ನು ನಿರ್ಮಿಸಿಲಾಗಿದ್ದು, ಬನ್‌ಜಾಕ್ರಿಯ ಸೊಬಗನ್ನು ಅತ್ಯಂತ ಸಮೀಪದಲ್ಲಿ ಆಸ್ವಾದಿಸಬಹುದು. ಅದೊಂದು ಅವಿಸ್ಮರಣೀಯ ಅನುಭವ. ಜಲಪಾತದ ಸುತ್ತಲೂ ಅಲಲ್ಲಿ ವ್ಯೂ ಪಾಯಿಂಟ್‌ಗಳನ್ನು ನಿರ್ಮಿಸಲಾಗಿದ್ದು, ಅಲ್ಲಿಂದ ಜಲಪಾತದ ವಿವಿಧ ಕೋನಗಳನ್ನು ಕಣ್ತುಂಬಿಕೊಳ್ಳಬಹುದು.

ಸಾಂಪ್ರದಾಯಿಕ ಪೂಜಾರಿಗಳ ಪ್ರತಿಕೃತಿಗಳನ್ನು ಅಲ್ಲಿ ನಿರ್ಮಾಣ ಮಾಡಿದ್ದು, ಆ ಪ್ರತಿಕೃತಿಗಳು ಜಲಪಾತದ ಹಿನ್ನೆಲೆಯ ಕಥೆ ಹೇಳುವಂತಿವೆ. ಪ್ರಕೃತಿ ನಮಗೆ ವರದಾನವಾಗಿ ನೀಡಿದ ಸುಂದರ ಪರಿಸರವನ್ನು ಸಮರ್ಪಕವಾಗಿ ನಿರ್ವಹಿಸಿದಲ್ಲಿ, ಅದು ಹೇಗೆ ಇರಬಹುದು ಎನ್ನುವುದಕ್ಕೆ ಸಿಕ್ಕಿಂನ ಜಲಪಾತ ಒಂದು ಅಪರೂಪದ ನಿದರ್ಶನ. ಸಿಕ್ಕಿಂನ ಜಲಪಾತ ಸಂತೋಷದ ಜೊತೆಗೆ ಸಣ್ಣ ವಿಷಾದವೊಂದನ್ನೂ ಮನಸ್ಸಿನೊಳಗೆ ಉಳಿಸಿಬಿಡುತ್ತದೆ. ಅದು ನಮ್ಮಲ್ಲಿನ ಜಲಪಾತಗಳನ್ನು ನಾವು ನಿರ್ವಹಿಸಿರುವ ರೀತಿಗಾಗಿ ಉಂಟಾಗುವ ವಿಷಾದ.

ಬನ್‌ಜಾಕ್ರಿ ಜಲಪಾತ ಹಿರಿಯ ನಾಗರಿಕರಿಗೆ ಹೇಳಿ ಮಾಡಿಸಿದ ಸ್ಥಳ. ಹೆಚ್ಚಿನ ಅಪಾಯಕ್ಕೆ ಆಸ್ಪದವಿಲ್ಲದ ಪರಿಸರ ಮೈಮನಗಳಿಗೆ ಉಲ್ಲಾಸ ನೀಡಬಲ್ಲದು. ಆ ಕಾರಣದಿಂದಲೇ ಮನೆಮಂದಿ ರಜೆ ದಿನಗಳಲ್ಲಿ ಇಲ್ಲಿಗೆ ಬಂದು ದಣಿವಾರಿಸಿಕೊಳ್ಳುತ್ತಾರೆ; ಉಲ್ಲಾಸವನ್ನು ನವೀಕರಿಸಿಕೊಳ್ಳುತ್ತಾರೆ. ಛಾಯಾಗ್ರಾಹಕರ ಪಾಲಿಗೂ ಇದು ಚುಂಬಕ ಸ್ಥಳ. ಹಿರಿಯ ಕಿರಿಯ ಛಾಯಾಗ್ರಾಹಕರು ತಮ್ಮ ಫೋಟೊಗ್ರಫಿ ನೈಪುಣ್ಯವನ್ನು ಇಲ್ಲಿ ಒರೆಗೆ ಹಚ್ಚುತ್ತಾರೆ.

ಬನ್‌ಜಾಕ್ರಿ ಜಲಪಾತದ ಜೊತೆಗೆ ಸಮೀಪದಲ್ಲಿ ಸಾಕಷ್ಟು ಪ್ರವಾಸಿ ಸ್ಥಳಗಳಿವೆ. ತಾಶೀ ವ್ಯೂ ಪಾಯಿಂಟ್ ಮೂಲಕ ಹಿಮಾಲದ ಶ್ರೇಣಿಯ ಸುಂದರ ಚಿತ್ರಣ ಸವಿಯಬಹುದು. ಬಕ್ತಾಂಗ್ ಜಲಪಾತ, ಗಣೇಶ್ ಟೋಕ್, ಹನುಮಾನ್ ಟೋಕ್, ವೈಟ್ ಹಾಲ್ ಉದ್ಯಾನವನ, ಎಮ್ ಜಿ ಮಾರ್ಗ್ – ಇವೆಲ್ಲವೂ ಪ್ರವಾಸಿಗರ ಆಕರ್ಷಣೆಯ ಸ್ಥಳಗಳು. ■

## ಬನ್‌ಜಾಕ್ರಿಗೆ ದಾರಿ

ಬೆಂಗಳೂರಿನಿಂದ ರೈಲು (ನ್ಯೂ ಜಲಪೈಗುರಿ) ಅಥವಾ ವಿಮಾನದ (ಭಾಗ್ದೋದರ) ಮೂಲಕ ಗ್ಯಾಂಗ್‌ಟಾಕ್ ತಲುಪಬಹುದು. ಪ್ರವಾಸಿ ವಾಹನಗಳು ರೈಲು ಮತ್ತು ವಿಮಾನ ನಿಲ್ದಾಣದಲ್ಲಿಯೇ ಸಿಗುತ್ತದೆ. ನೋಂದಾಯಿತ ಪ್ರವಾಸಿ ಟ್ರಾವಲ್ಸ್ ಮೂಲಕವೂ ಜಲಪಾತಕ್ಕೆ ಹೋಗಬಹುದು.

ಅಕ್ಟೋಬರ್‌ನಿಂದ ಮೇ ತಿಂಗಳಿನವರೆಗೂ ಅಲ್ಲಿನ ಭೇಟಿ ನೀಡಲು ಸೂಕ್ತ ಸಮಯ. ಆಗ ಹಿಮಪಾತದ ಭಯವಿರುವುದಿಲ್ಲ ಹಾಗೂ ವಾತಾವರಣ ಹಿತವಾಗಿರುತ್ತದೆ. ಹಿಮಾಲಯದ ಮಡಿಲಿನ ಜಾಗಗಳನ್ನು ನೋಡಲು ಬಯಸುವವರು ಮಾರ್ಚ್ ತಿಂಗಳಿಂದ ಮೇ ತಿಂಗಳ ಅವಧಿಯನ್ನು ಪ್ರವಾಸಕ್ಕಾಗಿ ಆರಿಸಿಕೊಳ್ಳಬಹುದು.